# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .
## ಸಿ.ಸಿ. ನಂ. 542 / 2017

ಸಿಡಬ್ಲ್ಯೂ: 14
ಪಿಡಬ್ಲ್ಯೂ:7

ದಿನಾಂಕಃ **20-11-2025**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | |
|---|---|
| ಸಾಕ್ಷಿಯ ಹೆಸರು | - ಮಂಜುಳಾ |
| ತಂದೆಯ ಹೆಸರು | - ನರಸಪ್ಪ |
| ವಯಸ್ಸು | - **58** ವರ್ಷ |
| ಉದ್ಯೋಗ | - ಆರಕ್ಷಕ ಉಪನಿರೀಕ್ಷಕರು ಯಾದಗಿರಿ ಮಹಿಳಾ ಪೋಲೀಸ ಠಾಣೆ |
| ವಾಸಸ್ಥಳಃ | - ಯಾದಗಿರಿ |

ಮುಖ್ಯ ವಿಚಾರಣೆಃ ಸ.ಸ.ಅಭಿಯೋಜಕರಿಂದಃ

ದಿನಾಂಕ 07.03.2017 ರಿಂದ 10.05.2018 ರವರೆಗೆ ನಾನು ಆರಕ್ಷಕ ಉಪನಿರೀಕ್ಷಕಳಾಗಿ ಯಾದಗಿರಿ ನಗರ ಪೋಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತೇನೆ.

ದಿನಾಂಕ **25.07.2017** ರಂದು ಚಾಸಾ-**1** ರವರು ಠಾಣೆಗೆ ಹಾಜರಾಗಿ ದೂರು ಸಲ್ಲಿಸಿದರು. ಚಾಸಾ-**13** ರವರು ದೂರನ್ನು ಸ್ವೀಕರಿಸಿಕೊಂಡು ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಂಡಿದ್ದ್ರು. ದಿನಾಂಕ **26.07.2017** ರಂದು ಈ ಪ್ರಕರಣದ ಕಡತವನ್ನು ಚಾಸಾ-**13** ರವರಿಂದ ನಾನು ಮುಂದಿನ ತನಿಖೆಗೋಸ್ಕರ ವಹಿಸಿಕೊಂಡಿದ್ದೆ. ನಂತರ ಗುನ್ನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-**2** ಮತ್ತು **3** ರವರ ಸಮಕ್ಷಮ ಗುನ್ನಾ ಸ್ಥಳ ಪಂಚನಾವೆಯನ್ನು ಬೆಳಿಗ್ಗೆ **10.00** ಗಂಟೆಯಿಂದ **11.00** ಗಂಟೆಯವರೆಗೆ ನಾನು ಜರುಗಿಸಿರುತೇನೆ. ನಂತರ ನಾನು ಆರೋಪಿತಳ ವಿರುದ್ಧ ದೋಷಾರೋಪ ಪಟ್ಟಿಯನು ಸಲ್ಲಿಸಿರುತೇನೆ. ಸಾಕ್ಷಿಯು ಗುನ್ನಾ ಸ್ಥಳದ ಪಂಚನಾವೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿರುತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ2 ಬಿ ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿ ಪರ ವಕೀಲರಾದ ಃಶ್ರೀ. ಎಸ್.ಸಿ.ಎನ್. ರವರಿಂದಃ

ನಮ್ಮ ಠಾಣೆಯಿಂದ ಗುನ್ನಾ ಸ್ಥಳವು 2 ರಿಂದ 2.5 ಕಿ.ಮೀ ಅಂತರದಲ್ಲಿ ಇರುತ್ತದೆ. ಚಾಸಾ-1 ರವರು ಚಾಸಾ-2 ಮತ್ತು 3 ರವರ ಹೆಸರುಗಳನ್ನು ನಮಗೆ ನೀಡಿದ್ದರು ಆದ್ದರಿಂದ

ಅವರನು ಪಂಚರಾಗಲು ನಾನು ಕರೆದಿದ್ದೆ. ಚಾಸಾ-2 ಮತ್ತು 3 ರವರು ನೇರವಾಗಿ ಗುನ್ನಾ ಸ್ಥಳಕ್ಕೆ ಬಂದಿದ್ದರು. ಗುನ್ನಾ ಸ್ಥಳದಲ್ಲಿ ಜನರು ಸೇರಿದ್ದರು. ಅವರಲ್ಲಿ ಪಂಚರಾಗಲು ನಾನು ಹೇಳಿರುವುದಿಲ್ಲ ಏಕೆಂದರೆ ಚಾಸಾ-1 ರವರು ಚಾಸಾ-2 ಮತ್ತು 3 ರವರ ಹೆಸರುಗಳನ್ನು ನಮಗೆ ನೀಡಿದ್ದರು. ಬೆಳಿಗ್ಗೆ 10.00 ಗಂಟೆಗೆ ಗುನ್ನಾ ಸ್ಥಳದಲ್ಲಿ ನಾವು ಇದ್ದೆವು. ಗುನ್ನಾ ಸ್ಥಳದಲ್ಲಿ ಚಾಸಾ-1 ರವರ ಮನೆ ಇತ್ತು. ನಾವು ಗುನ್ನಾ ಸ್ಥಳಕೆ ಹೋದ 2 ನಿಮಿಷದಲ್ಲಿ ಚಾಸಾ- 2 ಮತ್ತು 3 ರವರು ಬಂದಿದ್ದರು.

ಗುನ್ನಾಸ್ಥಳದ ಮನೆಯಲ್ಲಿ 6 ಕೋಣೆಗಳು ಇರುತ್ತವೆ. ಗುನ್ನಾಸ್ಥಳದ ಮನೆಯು ಚಾಸಾ-1 ರವರದ್ದು ಇರುತದೆ. ದಿನಾಂಕ 26.07.2017 ರಂದು ನಾನು ಗುನ್ನಾ ಸ್ಥಳಕ್ಕೆ ಹೋಗಿ ಚಾಸಾ-2 ಮತ್ತು 3 ರವರ ಸಮಕ್ಷಮ ನಿಪಿ-2 ರಂತೆ ಗುನ್ನೆ ಸ್ಥಳದ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ .ಆರೋಪಿತಳು ಯಾವುದೇ ತಪ್ಪು ಮಾಡಿಲ್ಲ ಎಂದು ನನಗೆ ಕಂಡು ಬಂದರು ಸಹಾ ನಾನು ಅವಳ ವಿರುದ್ದ ಸುಳ್ಳು ದೋಷಾರೋಪ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-2 ನ್ನು ಬೆಳಿಗ್ಗೆ 10.00 ಗಂಟೆಯಿಂದ 11.00 ಗಂಟೆಯವರೆಗೆ ನಾನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಹಾಗೂ ಆರೋಪಿತಳಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.